**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 69/2019**

**ಪಿ ಡಬ್ಲ್ಯೂ:1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ 17.12.2024**

**ಮುಂ.ಪಾಟೀ ಸವಾಲುಃ ಶ್ರೀ ಎ ವಿ ಕೆ ವಕೀಲರಿಂದ 2 ರಿಂದ 12 ನೇ ಪ್ರತಿವಾದಿಗಳ ಪರ ವಕೀಲರುಃ**

12. ನೀಲವ್ವ ಪೂಜಾರ ನನ್ನ ಮಗಳು. ಸಾಕ್ಷಿಗೆ ಒಂದು ಸಂಚಗಾರ ಪತ್ರದ ಜರಾಕ್ಸ ಪ್ರತಿಯನ್ನು ತೋರಿಸಿ ಅದರ ಮೇಲೆ ಇರುವ ಸಹಿ ನೀಲವ್ವಳದಾ ಎಂದು ನೋಡಿ ಗುರುತಿಸಿ ಅಂತ ಕೇಳಿದಾಗ ಸಾಕ್ಷಿ ಅದು ತನಗೆ ಗೊತ್ತಾಗುವುದಿಲ್ಲ ಎಂದು ನುಡಿಯುತ್ತಾರೆ. ನಾನು ಹೆಬ್ಬಟ್ಟು ಸಹಿ ಮಾಡುತ್ತೇನೆ. ಸಾಕ್ಷಿಗೆ ವಾದ ಪತ್ರವನ್ನು ತೋರಿಸಿ ಅದರ ಮೇಲೆ ಇರುವ ಹೆಬ್ಬಟ್ಟನ್ನು ಗುರುತಿಸಲು ಹೇಳಿದಾಗ ಅದು ತನ್ನದಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ತಾನು ವಕೀಲರಿಗೆ ನೀಡಿದ ವಕಾಲತನ್ನು ತೋರಿಸಿ ಅದರ ಮೇಲೆ ಇರುವ ಹೆಬ್ಬಟ್ಟಿನ ಗುರುತನ್ನು ತನ್ನದಾ ಎಂದು ಗುರುತಿಸಲು ಕೇಳಿದಾಗ ಸಾಕ್ಷಿ ಅದು ತನ್ನದಲ್ಲ ಎಂದು ನುಡಿಯುತ್ತಾರೆ. ಈ ದಾವಾ ದಾಖಲಿಸುವ ಮುನ್ನ ಯಾವುದೇ ಸಹಿ ವೆಗ್ಯೆರೆ ಮಾಡಿರುವುದಿಲ್ಲ.

13. ನ್ಯಾಯಾಲಯದ ಮುಂದೆ ಹಾಜರು ಇರುವ ವ್ಯಕ್ತಿಯನ್ನು ತೋರಿಸಿ ಅವರು ಯಾರು ಮತ್ತು ನಿಮಗೆ ಏನಾಗಬೇಕು ಎಂದರೆ ಸಾಕ್ಷಿ ಅವರು ಗದಿಗೆಪ್ಪ ನನ್ನ ಅಣ್ಣನ ಮಗ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ 1 ನೇ ಪ್ರತಿವಾದಿ ಏನು ತಕರಾರು ಹಾಕಿದ್ದಾರೆ ಅಂತ ನನಗೆ ಗೊತ್ತಿಲ್ಲ. ಸದರಿ ತಕರಾರನ್ನು ನಾನು ವಕೀಲರಿಂದ ಓದಿಸಿ ತಿಳಿದುಕೊಂಡಿರುವುದಿಲ್ಲ. ಪ್ರತಿವಾದಿಯರು ದಾಖಲಿಸಿದ ಕೌಂಟರ ಕ್ಲೇಮಗೆ ನಾನು ತಕರಾರು ದಾಖಲಿಸಿರುವುದಿಲ್ಲ.

14. ಸಂಶಿ ಗ್ರಾಮದಲ್ಲಿ ನೀಲಪ್ಪ ಫಕ್ಕೀರಪ್ಪ ಆಡಿನ ಅಂತ ವ್ಯಕ್ತಿ ಇದ್ದರಾ ಎಂದರೆ ಸಾಕ್ಷಿ ಅವರು ರಟ್ಟಿಗೇರಿಯಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಹನುಮಂತಪ್ಪ ತಳ್ಳಳ್ಳಿ ಎಂಬ ವ್ಯಕ್ತಿ ಅಂತ ವ್ಯಕ್ತಿ ಇದ್ದರಾ ಎಂದರೆ ಸಾಕ್ಷಿ ಅವರು ರಟ್ಟಿಗೇರಿಯಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಅದೇ ರೀತಿ ಪ್ರದಾನಪ್ಪ ಮಲ್ಲಾಪುರ ಎಂಬ ವ್ಯಕ್ತಿ ಇದ್ದರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ನಿಂಗಪ್ಪ ಹಳ್ಳಿಕೇರಿ ಇವರ ಪರಿಚಯ ಇರುವುದಿಲ್ಲ. ಪ್ರದಾನಪ್ಪ ಮತ್ತು ನಿಂಗಪ್ಪ ಇವರ ಪರಿಚಯ ನನಗೆ ಇದ್ದರು ಸಹ ಗೊತ್ತಿಲ್ಲ ಅಂತ ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನೀಲಪ್ಪ ಆಡಿನ ಮತ್ತು ಹನುಮಂತಪ್ಪ ನನಗೆ ಪರಿಚಯಸ್ಥರು ಎಂದರೆ ಸರಿ.

15. ನಾನು ಮತ್ತು 1ನೇ ಪ್ರತಿವಾದಿ ಇವರು ರಾಜೀ ಪತ್ರ ಮಾಡಿಕೊಂಡಿರುವುದಿಲ್ಲ. ನಾನು ಮತ್ತು 1ನೇ ಪ್ರತಿವಾದಿ ಇವರು ಸಾಕ್ಷಿದಾರರಾದ ನೀಲಪ್ಪ ಗುಡೇನಕಟ್ಟಿ, ಯ ಗ ತಮ್ಮನವರ, ಸಿ ಸಿ ಗೌಡಗೇರಿ, ತಾಳೆಯಾಳ, ಎನ್ ಎಮ್ ಹಳ್ಳಿಕೇರಿ, ಎನ್ ಎಮ್ ಪಾಟೀಲ ಹಾಗೂ ಎಚ್ ವಾಯ್ ಹುಬ್ಬಳ್ಳಿ ಇವರ ಸಮಕ್ಷಮ ಒಂದು ರಾಜೀ ಪತ್ರ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ರಾಜೀ ಪತ್ರದಲ್ಲಿ ನಮೂದಿಸಿದ ರಾಮಪ್ಪ ತಂದೆ ಕೆಂಚಪ್ಪ ಇಮ್ಮಡಿ ನಾನೇ ಎಂದರೆ ಸರಿ. ನಾನು ಸದರಿ ರಾಜೀ ಪತ್ರಕ್ಕೆ ಕೇಸು ವಾಪಾಸ್ಸು ತೆಗೆದುಕೊಳ್ಳುತ್ತೇನೆ ಅಂತ ಹೇಳಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ರೀತಿ ರಾಜೀ ಪತ್ರ ಮಾಡಿಕೊಂಡಿದ್ದರು ಸಹ ಮಾಡಿಕೊಂಡಿಲ್ಲ ಅಂತ ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

16. ದಾವಾ ಆಸ್ತಿಯ ಸರ್ವೇ ನಂಬರ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿ ಜಮೀನು ರಟ್ಟಿಗೇರಿ ಗ್ರಾಮದ ಸ.ನಂಃ5/3 ಸಿ ಕ್ಷೇತ್ರ 3 ಎಕರೆ 4 ಗುಂಟೆ ಎಂದರೆ ಸರಿ. ಅದರ ಉತ್ತರ ಕಡೆಯ 1 ಎಕರೆ 21 ಗುಂಟೆ ಜಮೀನು ನನ್ನ ತಂದೆ ಹಿಸ್ಸೆಗೆ ಬಂದಿತ್ತು ಎಂದರೆ ಸರಿ. ಸದರಿ 1 ಎಕರೆ 21 ಗುಂಟೆ ಜಮೀನು ಒಳಗೆ ಇರುವ ಉತ್ತರ ಭಾಗದ 1 ಎಕರೆ 16 ಗುಂಟೆಯ ಜಮೀನಿನ ಚಕ್ಕುಬಂದಿ ಪೂರ್ವಕ್ಕೆ ಸರಕಾರ ರಸ್ತೆ ಎಂದರೆ ಸರಿ, ಪಶ್ಚಿಮಕ್ಕೆ ಶಿರಸೋರಿ ಇವರ ಜಮೀನು ಎಂದರೆ ಸರಿ, ಉತ್ತರಕ್ಕೆ ತಿಪ್ಪಣ್ಣ ಇಮ್ಮಡಿ ಇವರ ಜಮೀನು ಎಂದರೆ ಸರಿ ಹಾಗೂ ದಕ್ಷಿಣಕ್ಕೆ ನನಗೆ ಸೇರಿದ ಉಳಿದ ಜಮೀನು ಇದೆ ಎಂದರೆ ಸರಿ.

17. ನಾನು ಮತ್ತು ನನ್ನ ಮಗಳು ನೀಲವ್ವ ಇವರು ಸೇರಿಕೊಂಡು ಮನೆತನದ ಅಡಚಣೆಗೋಸ್ಕರ ಹಾಗೂ ಬೇರೆಯವರ ಕಡೆಗೆ ಕೈಗಡ ಸಾಲ ಮಾಡಿದ್ದರಿಂದ ದಿಃ16.08.2010 ರಂದು ನಾವು ಸ.ನಂಃ5/3 ಸಿ ಕ್ಷೇತ್ರ 3 ಎಕರೆ 4 ಗುಂಟೆ ಪೈಕಿ ಉತ್ತರ ಭಾಗದ 1 ಎಕರೆ 16 ಗುಂಟೆ ಜಮೀನನ್ನು ಮಾರಾಟಕ್ಕೆ ಹಚ್ಚಿದ್ದೇವು ಎಂದರೆ ಸರಿಯಲ್ಲ. ಸದರಿ

ಜಮೀನನ್ನು 1 ಮತ್ತು 2 ನೇ ಪ್ರತಿವಾದಿ ಇವರು ರೂ 57,540/ ಗಳಿಗೆ ಖರೀದಿಸಲು ಮುಂದಾಗಿದ್ದರಿಂದ ಹಾಗೂ ಯೋಗ್ಯ ಬೆಲೆ ಆಗಿದ್ದರಿಂದ ಅದನ್ನು ನಾನು ಒಪ್ಪಿ ಅವರಿಂದ ಸಂಚಗಾರ ಹಣ ಎಂದು ರೂ 50 ಸಾವಿರ ಪಡೆದು ಖರೀದಿ ಪತ್ರ ಮಾಡಿಕೊಡಲು ಒಪ್ಪಿಕೊಂಡಿದ್ದೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಗಳು ರೂ 50 ಸಾವಿರ ಸಂಚಗಾರ ಹಣವನ್ನು ಸಾಕ್ಷಿದಾರರಾದ ನೀಲಪ್ಪ ಆಡಿನ, ಹನುಮಂತಪ್ಪ ತಳ್ಳಳ್ಳಿ, ನಿಂಗಪ್ಪ ಹಳ್ಳಿಕೇರಿ, ಪ್ರದಾನಪ್ಪ ಮಲ್ಲಾಪುರ ಇವರ ಸಮಕ್ಷಮ ಪಡೆದು ದಸ್ತು ಬರಹಗಾರರಾದ ಸುರೇಶ ನಿಡಗುಂದಿ ಇವರ ಸಮಕ್ಷಮ ಸಂಚಗಾರ ಪತ್ರವನ್ನು 1 ಮತ್ತು 2 ನೇ ಪ್ರತಿವಾದಿಗೆ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದನ್ನು ಲಾವಣಿ ಅಂತ ಕೊಟ್ಟಿದ್ದೇವು ಎಂದು ನುಡಿಯುತ್ತಾರೆ. ಈ ರೀತಿ ನಾವು ಸಂಚಗಾರ ಪತ್ರ ಬರೆದುಕೊಟ್ಟಿದ್ದರು ಸಹ ಇಲ್ಲ ಅಂತ ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸಂಚಗಾರ ಪತ್ರಕ್ಕೆ ನಾನು ಹೆಬ್ಬಟ್ಟು ಸಹಿ ಹಾಗೂ ನನ್ನ ಮಗಳು ಸಹಿ ಮಾಡಿರುತ್ತಾಳೆ ಎಂದರೆ ಸರಿಯಲ್ಲ.

18. 1 ಮತ್ತು 2 ನೇ ಪ್ರತಿವಾದಿ ಇವರು ಬಾಕಿ ಹಣ ರೂ 7,540/ನ್ನು ಪಡೆದು ಕ್ರಯ ಪತ್ರ ಮಾಡಿಕೊಡಿ ಅಂತ ಸುಮಾರು ಸಾರೀ ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಹುಟ್ಟಿಸಿಕೊಂಡು ದಾಖಲೆ ಎಂದು ನುಡಿಯುತ್ತಾರೆ. 1 ಮತ್ತು 2 ನೇ ಪ್ರತಿವಾದಿಯರು ನಮಗೆ ಕರೆದೇ ಇಲ್ಲ ಅಂತ ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ 1 ಎಕರೆ 16 ಗುಂಟೆ ಜಮೀನನ್ನು ಖರೀದಿ ಪತ್ರ ಮಾಡಿಕೊಡುವ ಬಾಧ್ಯಸ್ಥನಾಗಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಸದರಿ ಖರೀದಿ ಪತ್ರವನ್ನು ಬರೆದುಕೊಡಲು ಬಾಧ್ಯಸ್ಥನಾಗಿದ್ದರು ಸಹ ಇಲ್ಲ ಅಂತ ಅವರ ದುಡ್ಡನ್ನು ಎತ್ತಿಹಾಕುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯರ ವಿರುದ್ಧ ಸುಳ್ಳು ದಾವಾ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ 2 ರಿಂದ 12 ನೇ ಪ್ರತಿವಾದಿಗಳ ಪರ ವಕೀಲರು ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

SD/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**